

# ಬಿಗ್ ಬಾಸ್ ಸಿಂಡ್ರೆಲಾ ಕನಸುಗಳ ಸಾಕಾರಶಕ್ತಿ

ಮನರಂಜನೆಯ ರೂಪದಲ್ಲಿ ಪ್ರಚಾರದಲ್ಲಿರುವ 'ಬಿಗ್ ಬಾಸ್' ರಿಯಾಲಿಟಿ ಶೋಗೆ ಜೀವನದ ಪಾಠಗಳನ್ನು ಕಲಿಸಿಕೊಡುವ ಶಕ್ತಿಯೂ ಇದೆ. ಅನೇಕ ಯುವಕ ಯುವತಿಯರಿಗೆ ತಮ್ಮಲ್ಲಿರುವ ಪ್ರತಿಭೆಯನ್ನು ಬೆಳೆಸಿಕೊಳ್ಳಲು ಉತ್ತಮ ಅವಕಾಶ ಕಲ್ಪಿಸುವ 'ಬಿಗ್ ಬಾಸ್', 'ಸಿಂಡ್ರೆಲಾ' ಕನಸನ್ನು ಕೆಲವರಿಗಾದರೂ ವಾಸ್ತವಗೊಳಿಸುವ ಮಹಾಮಾಯಿ.

■ ಸಿ.ಎನ್. ರಾಮಚಂದ್ರನ್

'ದೊಡ್ಡಣ್ಣ ನಿನ್ನನ್ನು ಸದಾ ಗಮನಿಸುತ್ತಿರುತ್ತಾನೆ' ('The Big Brother is watching you') ಎಂಬ ವಾಕ್ಯ ಜಾರ್ಜ್ ಆರ್ವೆಲ್ ಬರೆದ '1984' ಎಂಬ ಕಾದಂಬರಿಯಲ್ಲಿ ಮತ್ತೆ ಮತ್ತೆ ಬರುತ್ತದೆ. 1948ರಲ್ಲಿ ಪ್ರಕಟವಾದ ಈ ಕಾದಂಬರಿ ರಷ್ಯಾದ ಸ್ಟಾಲಿನ್, ಜರ್ಮನಿಯ ಹಿಟ್ಲರ್, ಮುಂತಾದವರ ಮಾದರಿಯಲ್ಲಿ ಸರ್ವಾಧಿಕಾರತ್ವ ಮುಂದುವರೆದರೆ ಭವಿಷ್ಯದಲ್ಲಿ ವಾಸ್ತವವಾಗಬಹುದಾದ 'ಭೀಭತ್ಸ ರಾಜ್ಯ'ವನ್ನು (Dystopia) ಚಿತ್ರಿಸುತ್ತದೆ. ಈ ಕಾದಂಬರಿಯಲ್ಲಿ ಬಿಗ್ ಬ್ರದರ್ ಎಂಬ ಸರ್ವಾಧಿಕಾರಿ ತನ್ನ ಹಾಗೂ ತನ್ನ ಪಕ್ಷದ ವಿರುದ್ಧ ಯಾರೂ ದನಿಯೆತ್ತದಂತೆ ಪ್ರತಿಯೊಬ್ಬರನ್ನೂ (ಕೊನೆಗೆ ಅವರ ಯೋಚನೆಗಳನ್ನೂ) ನಿಯಂತ್ರಿಸಲು ಎಲ್ಲರ ಮನೆಯಲ್ಲಿರುವ ಇಬ್ಬದಿಯ ಟೆಲಿವಿಶನ್ (ನೋಡುತ್ತಿರುವವರನ್ನೂ ಹೊರಗಿನಿಂದ ಇತರರು ನೋಡಬಹುದಾದ ಟೆಲಿಸ್ಕ್ರೀನ್), ಎಲ್ಲೆಲ್ಲಿಯೂ ಇರುವ ಕ್ಯಾಮೆರಾಗಳು, ರಹಸ್ಯವಾಗಿ ಇಟ್ಟಿರುವ ಮೈಕ್ರೋಫೋನ್, ಇತ್ಯಾದಿ ಅತ್ಯಾಧುನಿಕ ತಾಂತ್ರಿಕ ಸಾಧನಗಳನ್ನು ಉಪಯೋಗಿಸುತ್ತಾನೆ. ಈ ವಿವರಗಳು, 'ಬಿಗ್ ಬಾಸ್' ಎಂಬ ರಿಯಾಲಿಟಿ ಶೋ '1984' ಕಾದಂಬರಿಯಿಂದ ಪ್ರೇರಿತವಾಗಿದೆಯೇ ಎಂಬ ಅನುಮಾನವನ್ನುಂಟು ಮಾಡುತ್ತವೆ.

ಹಾಗೆ ನೋಡಿದರೆ, ನೆದರ್ಲ್ಯಾಂಡ್ಸ್‌ನ 'ಎಂಡೆಮೋಲ್' ಎಂಬ ಸಂಸ್ಥೆ ರೂಪಿಸಿದ ('ಸೂಪರ್ ಮಿನಿಟ್,' 'ಖತರೋಂಕೆ ಖಿಲಾಡಿ' ಇತ್ಯಾದಿ) ಅನೇಕ ಗೇಮ್ ಶೋಗಳಲ್ಲಿ ಒಂದಾದ 'ಬಿಗ್ ಬಾಸ್' ಆಟದ ಹೆಸರು ಮೊದಲಿಗೆ 'ಬಿಗ್ ಬ್ರದರ್' ಎಂದೇ ಇತ್ತು. ಶಿಲ್ಪಾ ಶೆಟ್ಟಿ ಪ್ರಕರಣದಿಂದ ಕುಖ್ಯಾತವಾದ ಇದೇ ಹೆಸರಿನ ಶೋ ಇಂಗ್ಲೆಂಡ್‌ನಲ್ಲಿ ಸಾಕಷ್ಟು ಜನಪ್ರಿಯವಾಗಿತ್ತು. 2006ರಲ್ಲಿ ಹಿಂದಿಯಲ್ಲಿ ಈ ಆಟವು ಭಾರತಕ್ಕೆ ಬಂದಾಗ ಅದು 'ಬಿಗ್ ಬಾಸ್' ಎಂದು ರೂಪಾಂತರಗೊಂಡಿತು. 2013ರಲ್ಲಿ ಬಿಗ್ ಬಾಸ್ ಕನ್ನಡದಲ್ಲಿ, ಅನಂತರ ತಮಿಳು, ತೆಲುಗು, ಮಲಯಾಳಂ, ಮರಾಠಿ, ಬಂಗಾಳಿ, ಇತ್ಯಾದಿ ಭಾಷೆಗಳಲ್ಲಿ ಕಾಣಿಸಿಕೊಂಡಿತು. ಅನೇಕ ಕಾರಣಗಳಿಂದ, ಬಂಗಾಳಿಯಲ್ಲಿ ಪ್ರೇಕ್ಷಕರನ್ನು ಪಡೆಯಲು ಈ ಶೋ ವಿಫಲವಾದರೂ ಇತರ ಭಾಷೆಗಳಲ್ಲಿ ಅದು ವರ್ಷದಿಂದ ವರ್ಷಕ್ಕೆ ಹೆಚ್ಚು ಹೆಚ್ಚು ಜನಪ್ರಿಯತೆಯನ್ನು ಗಳಿಸುತ್ತಿದೆ.

ನಿಜ; ಮೂಲತಃ ಬಿಗ್ ಬಾಸ್ ಎಂದರೆ ಬಿಗ್ ಬಿಜಿನೆಸ್. ಅಂತರ್ಜಾಲದಲ್ಲಿ ಸಿಗುವ ಮಾಹಿತಿಯನ್ನು ನಂಬಬಹುದಾದರೆ, ಹಿಂದಿಯಲ್ಲಿ ಈ ಶೋ ತಯಾರಿಸಿ ಬಿತ್ತರಿಸುವ ವಾಹಿನಿ ಒಂದು ಆವೃತ್ತಿಗೆ 140ರಿಂದ 150 ಕೋಟಿ ರೂಪಾಯಿ ಹಣ ಹೂಡುತ್ತದೆಯಂತೆ. ಇದರಲ್ಲಿ ಬರುವ ಹತ್ತು ಸೆಕೆಂಡ್‌ನ ಒಂದು ಜಾಹೀರಾತಿನ ಬೆಲೆ 3ರಿಂದ 5 ಲಕ್ಷ ರೂಪಾಯಿ. ಪ್ರತಿ ವಾರಾಂತ್ಯದಲ್ಲಿ